Case called before Lok Adalath. One Sri. BVY., advocate files vakalath for defendants No.1 & 2. Both the parties and their counsel present and files U/o 23 Rule 3 application.

**ರಾಜಿ ಅರ್ಜಿಯ ಮೇರೆಗೆ ಆದೇಶ**

1. ವಾದಿ ಮತ್ತು ಪ್ರತಿವಾದಿಯರು ಈ ದಾವೆಯನ್ನು ಹಿರಿಯರು ಮತ್ತು ಪಂಚಾಯಿತಿದಾರರ ಸಲಹೆ ಮತ್ತು ಸೂಚನೆಯಂತೆ ಹಿತೈಷಿಗಳ ಮಾರ್ಗದರ್ಶನದಂತೆ ಈ ಕೆಳಕಂಡಂತೆ ರಾಜೀ ಮಾಡಿಕೊಂಡಿರುತ್ತಾರೆ.

2. ವಾದಿಯು ಪ್ರತಿವಾದಿಗಳಿಂದ ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕೃಷ್ಣರಾಜಪೇಟೆ ಗ್ರಾಮದ ಜಮಾಬಂಧಿಗೆ ಸರ್ವೆ ನಂ: 226/4 ರಲ್ಲಿ ಪೂರ್ತ ವಿಸ್ತೀರ್ಣ 0.12 ಗುಂಟೆ ಜಮೀನಿನ ಪೈಕಿ 0.01 ಗುಂಟೆ ಜಮೀನನ್ನು ಪ್ರತಿವಾದಿಯರ ದರದ್ದು ನಿಮಿತ್ತ ಅಂದರೆ ಮನೆ ನಿರ್ಮಾಣ ಮಾಡುವ ಖರ್ಚಿನ ಸಲುವಾಗಿ ದಿನಾಂಕ: 09-06-2026 ರಂದು ವಾದಿಗೆ ದಾವಾ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ಜಮೀನಿನ ಶುದ್ಧ ಕ್ರಯದ ಕರಾರು ಪತ್ರವನ್ನು ರೂ. ವಾದಿಗೆ ನಗದು ಗೌರಮೆಂಟ್ ರೂ. 3,70,000/- (ಮೂರು ಲಕ್ಷದ ಎಪ್ಪತ್ತು *ಸಾವಿರ) ಗಳಿಗೆ ಬರೆದುಕೊಟ್ಟಿದ್ದು ರೂ. ರೂ. 3,50,000/- (ಮೂರು ಲಕ್ಷದ ಐವತ್ತು ಸಾವಿರ) ಗಳನ್ನು ಸಾಕ್ಷಿಗಳ ಸಮ್ಮುಖ ಪಡೆದುಕೊಂಡು ಉಳಿಕೆ ರೂ.20,000/- (ಇಪ್ಪತ್ತು ಸಾವಿರ) ಗಳನ್ನು ದಾವಾ ಷೆಡ್ಯೂಲ್‌ನ ದಾಖಲಾತಿಗಳನ್ನು ಒದಗಿಸಿ 11-ಇ ಸ್ಕೇಚ್ ಮಾಡಿಸಿ ಉಳಿಕೆ ಹಣವನ್ನು ಪಡೆದುಕೊಂಡು ನೋಂದಣಿ ಮಾಡಿಕೊಡುತ್ತೇವೆ ಎಂದು, ವಾದಿಗೆ ಕ್ರಮಬದ್ದವಾದ ಕ್ರಯ ಪತ್ರವನ್ನು

ಬರೆದುಕೊಡಲು ಒಪ್ಪಿಕೊಂಡಿದ್ದು ಕ್ರಮವಾದ ಕ್ರಯಪತ್ರವನ್ನು ಬರೆದುಕೊಡುವ ಜಮೀನಿನ ಸ್ವಾಧೀನ ರಹಿತ ಕರಾರು ಪತ್ರವನ್ನು ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿಯರು ಸದರಿ ಅವಶ್ಯಕವಾದ ದಾಖಲೆಗಳನ್ನು ಒದಗಿಸಿಕೊಂಡು ಸ್ಕೆಚ್ ಮಾಡಿಸಲು ಸಾಧ್ಯವಾಗಿರುವುದಿಲ್ಲ. ಆಗಾಗಿ ಮಾನ್ಯ ಘನ ನ್ಯಾಯಾಲಯದ ಮುಂದೆ ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಮಾಡಿಸಿಕೊಳ್ಳಬೇಕಾಗಿರುವುದು ಪ್ರತಿವಾದಿಯರು ವಾದಿಯಿಂದ ಪಡೆಯಬೇಕಾದ ಉಳಿಕೆ ಸಂಪೂರ್ಣ ಹಣವನ್ನು ಪಡೆದುಕೊಂಡಿರುತ್ತಾರೆ ಮತ್ತು ಈ ದಿನದಿಂದ ಒಂದು ತಿಂಗಳೊಳಗಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸಿಕೊಂಡು ಬಂದು ಕ್ರಮವಾದ ಕ್ರಯ ಪತ್ರವನ್ನು ವಾದಿಗೆ ಬರೆದುಕೊಡಲು ಪ್ರತಿವಾದಿಯರು ಕ್ರಮವಾದ ಕ್ರಯ ಪತ್ರವನ್ನು ಬರೆದುಕೊಡಲು ಸಿದ್ಧರಿರುವುದಾಗಿ ಮುಕ್ತ ಸಮ್ಮತಿಯಿಂದ ಒಪ್ಪಿರುತ್ತಾರೆ. ಒಂದು ವೇಳೆ ಪ್ರತಿವಾದಿಯರು ಕ್ರಮವಾದ ಕ್ರಯ ಪತ್ರವನ್ನು ಬರೆದುಕೊಡಲು ವಿಫಲರಾದರೆ ವಾದಿಯು ನ್ಯಾಯಾಲಯದಿಂದ ಒಬ್ಬ ಆಯುಕ್ತರನ್ನು ನೇಮಿಸಿಕೊಂಡು ಕ್ರಮವಾದ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಪ್ರತಿವಾದಿಯರ ಯಾವುದೇ ತಕರಾರು ಇಲ್ಲವೆಂದು ಮುಕ್ತ ಸಮ್ಮತಿಯಿಂದ ಒಪ್ಪಿರುತ್ತಾರೆ.

3. ಸದರಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಉಳಿಕೆ ಹಣವಾದ ರೂ. 20,000/- (ಇಪ್ಪತ್ತು ಸಾವಿರ) ಗಳನ್ನು ವಾದಿಯಿಂದ ಪಡೆದುಕೊಂಡು ಕ್ರಯದ ಕರಾರಿನ ಹಣ ಸಂಪೂರ್ಣವಾಗಿ ಸಂದಾಯವಾಗಿರುವ ಕಾರಣ ಮತ್ತು ಪಂಚಾಯಿತಿದಾರರ ವಾದಿ ಮತ್ತು ಪ್ರತಿವಾದಿಯರು ಪರಸ್ಪರ ಸಮ್ಮತಿಯಂತೆ ವಾದಿಯ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದು ಪ್ರತಿವಾದಿಯರು ಮುಕ್ತ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಆಸ್ತಿಯ ಮೇಲೆ ಇನ್ನು ಮುಂದೆ

ಪ್ರತಿವಾದಿಯರಿಗಾಗಲೀ, ಅವರ ಕಾನೂನು ವಾರಸುದಾರರಿಗಾಗಲೀ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಮತ್ತು ಸದರಿ ದಾವಾ ಷೆಡ್ಯೂಲ್‌ನ್ನು ಹೊರತುಪಡಿಸಿ ಉಳಿಕೆ ಜಮೀನುಗಳ ಮೇಲೆ ಮಾತ್ರ ಹಕ್ಕಿರುತ್ತದೆ.

4.ದಾವಾ ಷೆಡ್ಯೂಲ್‌ನ ಕ್ರಯದ ಕರಾರಿಗೆ ಸಂಬಂಧಿಸಿದಂತೆ ತಂಟೆ ತಕರಾರು ಬಂದಲ್ಲಿ ಪ್ರತಿವಾದಿಗಳೇ ಸಮ್ಮತಿಯಿಂದ ಒಪ್ಪಿಕೊಂಡಿರುತ್ತಾರೆ. ಬಗೆಹರಿಸಿಕೊಡುವುದಾಗಿ ಮುಕ್ತ ಆದ್ದರಿಂದ ಮಾನ್ಯ ಘನ ನ್ಯಾಯಾಲಯವು ಈ ರಾಜೀ ಅರ್ಜಿಯಂತೆ ವಾದಿಯು ದಾವೆಯಲ್ಲಿ ಕೋರಿರುವಂತೆ ತೀರ್ಪು ಮತ್ತು ಡಿಕ್ರಿ ನೀಡಬೇಕಾಗಿ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

**ಷೆಡ್ಯೂಲ್ ಸ್ವತ್ತಿನ ವಿವರ**

ಹೋಬಳಿ. ಮಂಡ್ಯ ಜಿಲ್ಲೆ, ಕೃಷ್ಣರಾಜಪೇಟೆ ತಾಲ್ಲೂಕು, ಕಸಬಾ ಕೃಷ್ಣರಾಜಪೇಟೆ ಗ್ರಾಮದ ಜಮಾಬಂಧಿಗೆ ಸರ್ವೆ ನಂ: 226/4 ರಲ್ಲಿ ಪೂರ್ತ ವಿಸ್ತೀರ್ಣ 0.12 ಗುಂಟೆ ಜಮೀನಿನ ಪೈಕಿ 0.01 ಗುಂಟೆ ಜಮೀನಿಗೆ ಚೆಕ್ಕುಬಂಧಿ.

ಪೂರ್ವಕ್ಕೆ: ಬಾಲಕೃಷ್ಣ ರವರ ಜಮೀನು

ಪಶ್ಚಿಮಕ್ಕೆ: 20 ಅಡಿ ರಸ್ತೆ ಮತ್ತು ನಮ್ಮ ಬಾಬು ಜಮೀನು

ಉತ್ತರಕ್ಕೆ: ನಮ್ಮ ಬಾಬು ಉಳಿಕೆ ಜಮೀನು

ದಕ್ಷಿಣಕ್ಕೆ: ಯೋಗೇಂದ್ರ ರವರಿಗೆ ಕ್ರಯದ ಕರಾರು ಮಾಡಿರುವ ಜಮೀನು

**:: ಆದೇಶ ::**

ವಾದಿಯರು ದಾಖಲು ಮಾಡಿರುವ ಈ ದಾವೆಯನ್ನು ರಾಜಿ ಅರ್ಜಿಯ ಮುಖೇನ ವಿಲೇವಾರಿ ಮಾಡಲಾಗಿದೆ. ರಾಜಿ ಅರ್ಜಿಯು ತೀರ್ಪಿನ ಒಂದು ಭಾಗವಾಗಿರುತ್ತದೆ. ಅದರಂತೆ ಡಿಕ್ರಿಯನ್ನು ಬರೆಯಿರಿ.

**(ಶ್ರೀಮತಿ.ಸುಷ್ಮಾ.ಸಿ.)**

1 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಕೆ.ಆರ್.ಪೇಟೆ.